ಹಾಗಾಗದೆ, ನನ್ನ ಡೆಸ್ಟಿನಿಯು ನನ್ನದೇ ಆಯ್ಕೆಯಾಗಿತ್ತು ಎಂಬುದನ್ನು ನಾನು ಹೇಳಿದಂತಾಯಿತು' ಎಂದು ಯೋಚಿಸುತ್ತಾಳೆ ಮತ್ತು ಇದನ್ನೇ ಅವಳು ಬೇರೊಂದು ಕಡೆ ಬರೆದುಕೊಳ್ಳುತ್ತಾಳೆ. ರಂಗಭೂಮಿಗೆ ಹೊಸ ಆಯಾಮವನ್ನು ತರಬೇಕೆಂದು ಹೊರಟ, ಈ ಎಡಪಂಥೀಯ ಕೆಂಪುಮುಡಿಯ ಹೆಣ್ಣಿನ ಮೂಲಕವೇ ಕಾದಂಬರಿಯ ವಿನ್ಯಾಸವು ಬಿಚ್ಚುತ್ತಾ ಅಥವಾ ಹೆಣೆಯುತ್ತಾ ಹೋಗುವುದು ಕಾದಂಬರಿಯ ವಿಶೇಷ.

ಇಸ್ತಾಂಬುಲ್ ಸಮೀಪದ ಹಳ್ಳಿಯ ಬರಡು ನೆಲದಲ್ಲಿ ಬಾವಿ ತೋಡಲು ತೊಡಗುವ ಮಾಸ್ಟರ್ ಮೆಹಮುತ್ ಮತ್ತು ಹದಿನಾರರ ತರುಣ ಸೆಮ್, ಭೂಮಿ ಅಗೆಯುವ ಕೆಲಸದ ಮೂಲಕ ಒಬ್ಬರಿಗೊಬ್ಬರು ಇಂಬಾಗುತ್ತಾರೆ. ಸೆಮ್, ತನ್ನ ವ್ಯಾಸಂಗಕ್ಕಾಗಿ ಹಣ ಸಂಪಾದಿಸಲು ಅನಿವಾರ್ಯವಾಗಿ ಬಾವಿ ತೋಡುವ ಕೆಲಸದಲ್ಲಿ ತೊಡಗಿಕೊಂಡಿದ್ದಾನೆ. ಆಗಷ್ಟೇ ಅರಳಲು ತೊಡಗಿರುವ ಸೆಮ್‌ನ ಆಳದ ಪ್ರಜ್ಞೆ ಮತ್ತು ವಿಚಾರಗಳ ಮೇಲೆ ಪ್ರಭಾವ ಬೀರುವುದು ಬಿಡುವಿನ ವೇಳೆಯಲ್ಲಿ ಸೆಮ್‌ಗೆ ಕತೆಗಳನ್ನು ಹೇಳುವ ಮೆಹಮುತ್. ಪುರಾಣ, ಕುರಾನ್‌ನ ವೃತ್ತಾಂತಗಳು ಮತ್ತು ಬಾವಿತೋಡುವ ಕಸುಬಿನಲ್ಲಿ ಪಡೆದ ಅನುಭವಗಳನ್ನು ಮೆಹಮುತ್ ಹೆಣೆಯುವ ಸೃಜನಶೀಲ ರೀತಿಯು, ಸೆಮ್‌ನೊಳಗೆ ಆಗಷ್ಟೇ ಮೊಳೆಯುತ್ತಿದ್ದ ಬರಹಗಾರನಾಗುವ ಆಸೆಯನ್ನು ಅರಳಿಸುತ್ತದೆ. ಎಡಪಂಥೀಯ ರಾಜಕೀಯ ಚಟುವಟಿಕೆಗಳಿಂದಾಗಿ ಜೈಲಿಗೆ ಹೋಗಿ, ಅಲ್ಲಿಂದ ಬಿಡುಗಡೆಗೊಂಡು, ಇದ್ದಕ್ಕಿದ್ದಂತೆ ಒಂದು ದಿನ ಮನೆಗೆ ಹಿಂತಿರುಗಿ ಬರದೆ ಕಾಣೆಯಾದ ತನ್ನ ಸ್ವಂತ ಅಪ್ಪನನ್ನು ಕತೆಗಾರ ಮೆಹಮೂತ್‌ನಲ್ಲಿ ಸೆಮ್ ಕಾಣುತ್ತಾನೆ.

ಬಾವಿತೋಡುವ ಪುರಾತನ ಕಲೆಯನ್ನು ಕರಗತ ಮಾಡಿಕೊಂಡಿರುವ ಮೆಹಮೂತ್, ನಶಿಸುತ್ತಿರುವ ಆ ಕಲೆಯ ಉತ್ತರಾಧಿಕಾರಿಯಂತೆ ಕಾಣುತ್ತಾನೆ. "ಭೂಮಿಯ ನೀರುನರಗಳು ನಿರೀಕ್ಷಿಸಿಲ್ಲದಾಗಲೇ ಚಿಮ್ಮುವುದು" ಎಂಬ ದರ್ಶನವುಳ್ಳ ಅವನ ಬದುಕಿನ ಅನುಭವಗಳೊಳಗೆ, ಪದರ ಪದರದಲ್ಲಿಯೂ ಬೇರೆಬೇರೆಯಾಗಿರುವ ಮಣ್ಣಿನ ಸತ್ವ ಮತ್ತು ಗುಣಗಳನ್ನು ಅರಿತವನು ಹೇಳುವ ಹಲವು ಕತೆಗಳಿವೆ. ಭೂಮಿಯ ಪದರಗಳ ಅಂತರಂಗವು ಮನುಷ್ಯನ ರಕ್ತನಾಳಗಳಿಂದ ಭಿನ್ನವಾಗಿಲ್ಲವೆಂದು ಅವನು ಚೆನ್ನಾಗಿ ಬಲ್ಲ. ತಾನು ಬಾವಿ ತೋಡಲು ಕಲಿಯುತ್ತಿದ್ದ ದಿನಗಳಲ್ಲಿ, ಭೂಮಿಯಲ್ಲಿ ನೀರಿನ ಒರತೆ ಸಿಗಲಿ ಅಥವಾ ಸಿಗದಿರಲಿ ಗೌರವದಿಂದ ನಡೆಸಿಕೊಳ್ಳುತ್ತಿದ್ದ ಮಾಲೀಕರನ್ನು ನೆನಪಿಸಿಕೊಳ್ಳುವ ಮೆಹಮೂತ್, ಸಂಸ್ಕೃತಿ ಮತ್ತು ನಾಗರಿಕತೆಯ ಮುಖಾಮುಖಿ ಹಾಗೂ ಅದರ ದುರಂತ ಪರಿಣಾಮಗಳನ್ನು ತೆರೆದಿಡುತ್ತಾನೆ. ಮುಗಿಯುವ ಹಂತಕ್ಕೆ ಬಂದ ಬಾವಿತೋಡುವ ಪರಂಪರೆಯ ಕೊನೆಯ ಕೊಂಡಿಯ ಹಾಗೆ ಇರುವ ಮೆಹಮೂತ್ ಮತ್ತು ಅವನ ಕಥನ ಕಲೆಯನ್ನು ಹಿಡಿದು ಕಾದಂಬರಿ ಬೆಳೆಯುತ್ತದೆ.

ಸೆಮ್ ಮತ್ತು ಮೆಹಮೂತ್ ದಿನಸಿ, ಸಿಗರೇಟು ಮತ್ತಿತರ ದಿನನಿತ್ಯದ ವಸ್ತುಗಳನ್ನು ಕೊಳ್ಳಲು ಹೋಗುವ ಪಕ್ಕದ ಹಳ್ಳಿಯಲ್ಲಿ ಒಂದು ದಿನ ಸೆಮ್ ಒಬ್ಬ ಕೆಂಪುಮುಡಿಯ ಹೆಣ್ಣನ್ನು ನೋಡುತ್ತಾನೆ; ಅವಳ ಮತ್ತು ಕೆಂಪುಮುಡಿಯ ತೀವ್ರ ಸೆಳೆತಕ್ಕೊಳಗಾಗುತ್ತಾನೆ. ರಂಗಭೂಮಿ ಕಲಾವಿದೆಯಾದ ಆಕೆ ವಯಸ್ಸಿನಲ್ಲಿ ಅವನಿಗಿಂತ ತುಂಬ ದೊಡ್ಡವಳು. ಅವಳು ತನ್ನ ಗಂಡನೊಡಗೂಡಿ ಊರಿಂದೂರಿಗೆ ಪಯಣಿಸುವ ನಾಟಕ ತಂಡವನ್ನು ನಡೆಸುತ್ತಾಳೆ. ಅದರಲ್ಲಿ ಅವಳೇ ಮುಖ್ಯ ಕಲಾವಿದೆ. ಒಂದು ದಿನ ಸೆಮ್, ತನ್ನ ಗುರು ಮೆಹಮೂತ್‌ನ ಕಣ್ಣುತಪ್ಪಿಸಿ ನಾಟಕದ ಟೆಂಟ್‌ಗೆ ಹೋಗುತ್ತಾನೆ. ಅಂದಿನ ಪ್ರದರ್ಶನದ ಕಡೆಯ ಭಾಗದಲ್ಲಿ, ಇಬ್ಬರು